ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-7 Special Issue-3, March - April 2026, Pp. 8-13**
**©*IIMRD*, Mysuru**

IIMRD JOURNALS
**www.iimrd.com**

# ಪ್ರಾಚೀನ ಕರ್ನಾಟಕ ರಾಜ್ಯದ ಆದಾಯ ಮತ್ತು ವ್ಯಯ

**ಡಾ.ಎನ್.ವಿ.ಅಸ್ಕಿ**
ಸಹ ಪಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸಂಶೋಧನಾ ಕೇಂದ್ರ, ಹುನ್ನೂರು

**ಸಾರಾಂಶ: (Abstract)**

*ಪ್ರಾಚೀನ ಕರ್ನಾಟಕವು ದಕ್ಷಿಣ ಭಾರತದ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಈ ಅಧ್ಯಯನವು ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ ರಾಜ್ಯ ಆದಾಯದ ಮೂಲಗಳು ಹಾಗೂ ವ್ಯಯದ ಸ್ವರೂಪವನ್ನು ವಿಶ್ಲೇಷಿಸುತ್ತದೆ. ಶಾಸನಗಳು, ತಾಮ್ರಫಲಕಗಳು ಮತ್ತು ಸಮಕಾಲೀನ ಸಾಹಿತ್ಯವನ್ನು ಆಧಾರವಾಗಿ ತೆಗೆದುಕೊಂಡು, ಕೃಷಿ, ವ್ಯಾಪಾರ, ದಂಡ, ಕಾಣಿಕೆ ಮುಂತಾದ ಆದಾಯ ಮೂಲಗಳು ಮತ್ತು ಆಡಳಿತ, ಸೇನೆ, ಧಾರ್ಮಿಕ ಸಂಸ್ಥೆಗಳು ಹಾಗೂ ಸಾರ್ವಜನಿಕ ಹಿತಕಾರ್ಯಗಳಿಗೆ ಮಾಡಲಾದ ವ್ಯಯವನ್ನು ವಿವರವಾಗಿ ಪರಿಶೀಲಿಸಲಾಗಿದೆ. ಈ ಅಧ್ಯಯನವು ಪ್ರಾಚೀನ ಕರ್ನಾಟಕದ ಆರ್ಥಿಕ ವ್ಯವಸ್ಥೆಯ ಸಂಘಟಿತ ಸ್ವರೂಪವನ್ನು ಅನಾವರಣಗೊಳಿಸುತ್ತದೆ.*

**ಮುಖ್ಯಪದಗಳು (Keywords):** *ಪ್ರಾಚೀನ ಕರ್ನಾಟಕ, ಆದಾಯ, ವ್ಯಯ, ಶಾಸನಗಳು, ಆರ್ಥಿಕ ವ್ಯವಸ್ಥೆ*

## ಪೀಠಿಕೆ

ಇತಿಹಾಸದ ಅಧ್ಯಯನದಲ್ಲಿ ಆರ್ಥಿಕ ವ್ಯವಸ್ಥೆಯ ಅರಿವು ಅತ್ಯಂತ ಮಹತ್ವದ್ದು. ರಾಜಕೀಯ ಸ್ಥಿರತೆ, ಸಾಮಾಜಿಕ ಸಮತೋಲನ ಹಾಗೂ ಸಾಂಸ್ಕೃತಿಕ ಬೆಳವಣಿಗೆಯು ಆರ್ಥಿಕ ಸ್ಥಿತಿಗತಿಗಳ ಮೇಲೆ ಅವಲಂಬಿತವಾಗಿವೆ. ಪ್ರಾಚೀನ ಕರ್ನಾಟಕದಲ್ಲಿ ಆಡಳಿತ ನಡೆಸಿದ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮುಂತಾದ ವಂಶಗಳು ಸುಸಂಘಟಿತ ಆದಾಯ–ವ್ಯಯ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದವು. ಈ ಸಂಶೋಧನಾ ಲೇಖನವು "ಪ್ರಾಚೀನ ಕರ್ನಾಟಕದಲ್ಲಿ ರಾಜ್ಯ ಆದಾಯ ಹೇಗೆ ಸಂಗ್ರಹವಾಗುತ್ತಿತ್ತು ಮತ್ತು ಆ ಆದಾಯವನ್ನು ಯಾವ ಉದ್ದೇಶಗಳಿಗೆ ವ್ಯಯಿಸಲಾಗುತ್ತಿತ್ತು?" ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ಪ್ರಯತ್ನಿಸುತ್ತದೆ.

## ಅಧ್ಯಯನದ ಉದ್ದೇಶಗಳು

ಪ್ರಾಚೀನ ಕರ್ನಾಟಕದ ರಾಜ್ಯ ಆದಾಯದ ಮೂಲಗಳನ್ನು ಗುರುತಿಸುವುದು. ರಾಜ್ಯ ವ್ಯಯದ ಸ್ವರೂಪ ಮತ್ತು ಉದ್ದೇಶಗಳನ್ನು ವಿಶ್ಲೇಷಿಸುವುದು. ಆರ್ಥಿಕ ವ್ಯವಸ್ಥೆಯು ಸಮಾಜ ಮತ್ತು ಧರ್ಮದ ಮೇಲೆ ಬೀರಿದ ಪ್ರಭಾವವನ್ನು ಅಧ್ಯಯನ ಮಾಡುವುದು. ಶಾಸನಾಧಾರಿತ ಆರ್ಥಿಕ ಮಾಹಿತಿಯ ಮಹತ್ವವನ್ನು ತಿಳಿಸುವುದು. ಈ ಅಧ್ಯಯನವು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಿದೆ.

*Please cite this article as:* ಅಸ್ಕಿ, ಎನ್.ವಿ. (2026). ಪ್ರಾಚೀನ ಕರ್ನಾಟಕ ರಾಜ್ಯದ ಆದಾಯ ಮತ್ತು ವ್ಯಯ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 8–13

**ಪ್ರಾಚೀನ ಕರ್ನಾಟಕದ ಆರ್ಥಿಕ ಹಿನ್ನೆಲೆ**

ಕರ್ನಾಟಕದ ಭೌಗೋಳಿಕ ಸ್ವರೂಪ ಮೈದಾನ, ಪರ್ವತ ಮತ್ತು ನದಿ ಕಣಿವೆಗಳು ಕೃಷಿ ಮತ್ತು ವ್ಯಾಪಾರಕ್ಕೆ ಅನುಕೂಲಕರವಾಗಿತ್ತು. ಕೃಷಿಯೇ ಆರ್ಥಿಕ ವ್ಯವಸ್ಥೆಯ ಕೇಂದ್ರೀಯ ಆಧಾರವಾಗಿದ್ದು, ಅದನ್ನು ಪೂರಕವಾಗಿ ಕೈಗಾರಿಕೆ ಹಾಗೂ ವ್ಯಾಪಾರ ಬೆಳವಣಿಗೆಯಾಯಿತು.

**ರಾಜ್ಯ ಆದಾಯದ ಮೂಲಗಳು**

ಪ್ರಾಚೀನ ಕರ್ನಾಟಕದಲ್ಲಿ ಜಮೀನಿನ ಉತ್ಪತ್ತಿಯಲ್ಲಿ ಆರನೇ ಒಂದು ಭಾಗ ರಾಜಾದಾಯವಾಗಿ ಸಲ್ಲಬೇಕೆಂಬ ನಿಯಮ ಇದ್ದಿರಬಹುದು. ಆದರೆ ಆಡಳಿತ ಬೆಳೆದಂತೆ ಮತ್ತು ಸಂಕೀರ್ಣವಾದಂತೆ ಬಗೆಬಗೆಯ ತೆರಿಗೆಗಳು ಮತ್ತು ಅವುಗಳನ್ನೆತ್ತುವ ವ್ಯವಸ್ಥೆಗಳು ರೂಪುಗೊಂಡವು. ಶಾಸನಗಳಿಂದ ಮತ್ತು ವ್ಯಾಪಾರಿ ಪ್ರವಾಸಿಗರ ಬರಹಗಳಿಂದ ಇವುಗಳ ವಿವರಗಳು ತಕ್ಕಮಟ್ಟಿಗೆ ತಿಳಿದು ಬರುತ್ತದೆ. ರಾಜ್ಯದ ಉತ್ಪಾದನೆಯ ಪ್ರಧಾನವಾದ ಅಂಶಗಳು ಈ ಕೆಳಗಿನಂತೆ ವಿಭಾಗ ಮಾಡಬಹುದಾಗಿದೆ.

ರೂಢವಾದ ತೆರಿಗೆಗಳು, ಆಗಾಗ ಹಾಕುತ್ತಿದ್ದ ವಿಶೇಷ ತೆರಿಗೆಗಳು, ತಪ್ಪಿತಸ್ತರಿಗೆ ವಿಧಿಸುತ್ತಿದ್ದ ದಂಡಗಳು. ಸರ್ಕಾರದ ಆಸ್ತಿಗಳಿಂದ ಬರುತ್ತಿದ್ದ ಉತ್ಪಾದನೆಗಳು. ಸಾಮಂತರ ಕಪ್ಪ ಕಾಣಿಕೆಗಳು.

ಇವುಗಳಲ್ಲಿ ರೂಢ ಮೂಲವಾದ ತೆರಿಗೆಗಳನ್ನು ರಾಷ್ಟ್ರಕೂಟರ ಕಾಲದಲ್ಲಿ 'ಉದ್ರಂಗ' ಮತ್ತು 'ಉಪರೀಕರ' ಎಂದು ಕರೆಯಲಾಗಿರುವುದು ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಈ ಪದಗಳ ಅರ್ಥವನ್ನು ಇತಿಹಾಸಕಾರರ ಮಾತುಗಳಲ್ಲಿ ಹೇಳಬೇಕೆಂದರೆ 'ಭಾಗಕರ' ಮತ್ತು 'ಭೋಗಕರ' ಎಂಬುದಾಗಿ ಇರಬೇಕೆಂಬುದು ಅವರ ಅಭಿಪ್ರಾಯವಾಗಿದೆ. ಅಂದರೆ ಇವು ಜಮೀನಿನ ಮೇಲೆ ಹಾಕುತ್ತಿದ್ದ ತೆರಿಗೆಗಳು, ಜಮೀನಿನ ಗುಣಕ್ಕೆ ಮತ್ತು ಬೆಳೆಗೆ ಅನುಗುಣವಾಗಿ ಈ ಕರಗಳ ಪ್ರಮಾಣವು ಬೇರೆ ಬೇರೆಯಾಗಿರುತ್ತಿದ್ದಂತೆ ತಿಳಿದು ಬರುತ್ತದೆ.

**ಭೂಮಿ ಆಧಾಯ**

ಭೂಮಿಯಿಂದ ವಸೂಲಾದ ತೆರಿಗೆಯೇ ಪ್ರಮುಖ ಆದಾಯವಾಗಿತ್ತು. ಭೂಮಿಯನ್ನು ಫಲವತ್ತತೆಯ ಆಧಾರದ ಮೇಲೆ ವರ್ಗೀಕರಿಸಿ ತೆರಿಗೆ ನಿಗದಿ ಮಾಡಲಾಗುತ್ತಿತ್ತು. ತೆರಿಗೆಯನ್ನು ಸಾಮಾನ್ಯವಾಗಿ ಧಾನ್ಯಗಳ ರೂಪದಲ್ಲಿ ವಸೂಲಿ ಮಾಡಲಾಗುತ್ತಿತ್ತು. ಇದಲ್ಲದೆ ಗದ್ಯಾಣ ಮತ್ತು ಚಿನ್ನದ ನಾಣ್ಯಗಳಾದ ಕಳಂಜುಗಳನ್ನು ತೆರೆಗೆ ರೂಪದಲ್ಲಿ ಪಡೆಯುತ್ತಿದ್ದದು ಕಂಡುಬರುತ್ತದೆ. ತೆರಿಗೆಗಳನ್ನು ಅನೇಕ ಕಂತುಗಳಲ್ಲಿ ಕೊಡುವ ಸೌಲಭ್ಯ ಪ್ರಜೆಗಳಿಗಿತ್ತು. ಯಾರಿಗೆ ತೆರೆಗೆ ನೀಡಲು ಸಾಧ್ಯವಿಲ್ಲವೋ ಅವರಿಂದ ವಿಷ್ಟಿ ಅಥವಾ ಬಿಟ್ಟಿ ಕೆಲಸವನ್ನು ಮಾಡಿಸಿಕೊಳ್ಳುತ್ತಿರುವ ಉದಾಹರಣೆಗಳು ಕಂಡುಬರುತ್ತವೆ. ಧಾನ್ಯ, ಎಣ್ಣೆಬೀಜ, ಹತ್ತಿ, ಸಕ್ಕರೆ ಕಬ್ಬು ಮುಂತಾದ ಬೆಳೆಗಳ ಮೇಲೆ ನಿಗದಿತ ಪ್ರಮಾಣದಲ್ಲಿ ತೆರಿಗೆ ವಿಧಿಸಲಾಗುತ್ತಿತ್ತು. ಕೆಲ ಸಂದರ್ಭಗಳಲ್ಲಿ ಧಾನ್ಯ ರೂಪದಲ್ಲಿಯೇ ತೆರಿಗೆ ಸ್ವೀಕರಿಸಲಾಗುತ್ತಿತ್ತು.

**ವ್ಯಾಪಾರ ಮತ್ತು ವಾಣಿಜ್ಯ ತೆರಿಗೆ**

ಪಟ್ಟಣಗಳು ಮತ್ತು ಮಾರುಕಟ್ಟೆಗಳು ರಾಜ್ಯ ಆದಾಯದ ಪ್ರಮುಖ ಕೇಂದ್ರಗಳಾಗಿದ್ದವು. ಮಾರುಕಟ್ಟೆ ಶುಲ್ಕ, ಸುಂಕ, ತೂಕ–ಅಳತೆ ತೆರಿಗೆ, ವಿದೇಶಿ ವ್ಯಾಪಾರದಿಂದಲೂ ರಾಜ್ಯಕ್ಕೆ ಸಾಕಷ್ಟು ಆದಾಯ ಲಭಿಸುತ್ತಿತ್ತು.

**ಕೈಗಾರಿಕೆ ಮತ್ತು ವೃತ್ತಿ ತೆರಿಗೆ**

ಕರಕುಶಲಕಾರರು, ಕಮ್ಮಾರರು, ನೇಕಾರರು, ತೈಲಕಾರರು ಮುಂತಾದ ವೃತ್ತಿಕರಿಂದ ತೆರಿಗೆ ಸಂಗ್ರಹಿಸಲಾಗುತ್ತಿತ್ತು.

**ದಂಡ ಮತ್ತು ನ್ಯಾಯಾಲಯ ಆದಾಯ**

ಅಪರಾಧಿಗಳಿಗೆ ವಿಧಿಸಲಾದ ದಂಡಗಳು ಹಾಗೂ ನ್ಯಾಯಾಲಯಗಳಲ್ಲಿ ವಿಧಿಸಲಾದ ದಂಡಶುಲ್ಕಗಳು ರಾಜ್ಯ ಖಜಾನೆಗೆ ಸೇರುತ್ತಿದ್ದವು.

**ಕಾಣಿಕೆ ಮತ್ತು ಉಡುಗೊರೆ**

ಸಾಮಂತರಿಂದ, ವ್ಯಾಪಾರಿಗಳಿಂದ ಮತ್ತು ಶ್ರೀಮಂತರಿಂದ ದೊರೆಯುವ ಕಾಣಿಕೆಗಳು ರಾಜ್ಯದ ಹೆಚ್ಚುವರಿ ಆದಾಯವಾಗಿದ್ದವು. ಮನೆಗಳು, ವ್ಯಾಪಾರದ ಸರಕುಗಳು ಮೊದಲಾದ ಬೆಳೆಗಳಿಗೂ ತೆರಿಗೆ ಹಾಕುತ್ತಿದ್ದರು. ಪ್ರತಿ ವರ್ಷವೂ ಕೊಡಬೇಕಾದ ತೆರಿಗೆಗಳಲ್ಲದೆ ಆಗಾಗ ವಿಶೇಷ ತೆರಿಗೆಗಳನ್ನು ಕೊಡಬೇಕಾಗುತ್ತಿದ್ದವು. ಪ್ರಜೆಗಳಿಗೆ ಸೇರದೆ ಇದ್ದ ಜಮೀನುಗಳು, ಕಾಡುಗಳು ಈ ಮೊದಲಾದ ಸರ್ಕಾರದ ಆಸ್ತಿಗಳಿಂದ ಬರುತ್ತಿದ್ದ ಉತ್ಪತ್ತಿಯು ಒಂದು ಪ್ರಮುಖವಾದ ಭಾಗವಾಗಿತ್ತು. ಲೋಹದ ಗಣಿಗಳು ಸರ್ಕಾರದ ವಶದಲ್ಲಿದ್ದು ಅವುಗಳ ಉತ್ಪಾದನೆ ಹೆಚ್ಚಲು ಕಾರಣವಾಗಿದ್ದವು.

ವಿಜಯನಗರ ಕಾಲದಲ್ಲಿ ತೆರಿಗೆಗಳ ಪದ್ಧತಿ ಇನ್ನೂ ಹೆಚ್ಚು ವ್ಯವಸ್ಥಿತವಾಯಿತು ಈ ಕಾಲದ ಶಾಸನಗಳಲ್ಲಿ ತೆರಿಗೆಯ ಮಾತು ಮತ್ತೆ ಬರುತ್ತದೆ 'ವರಿ' 'ಕಟ್ಟಾಯ' ಮೊದಲಾದ ಮಾತುಗಳು ನಾವು ಕಾಣಬಹುದಾಗಿದೆ. ಶಾಸನಗಳಲ್ಲದೆ ಅಬ್ದುಲ್ ರಜಾಕ್, ನ್ಯೂನೀಜ, ಪೆಯಿಸ್ ಮೊದಲಾದವರು ರಾಜ್ಯದ ಆದಾಯವನ್ನು ಕುರಿತು ವಿವರವಾಗಿ ವರ್ಣಿಸಿದ್ದಾರೆ. ಈ ಕಾಲದ ತೆರಿಗೆಗಳನ್ನು ಹೀಗೆ ವಿಂಗಡಿಸಬಹುದಾಗಿದೆ. ಜಮೀನಿನ ತೆರಿಗೆ, ಆಸ್ತಿ ತೆರಿಗೆ, ವ್ಯಾಪಾರ ತೆರಿಗೆ, ಉದ್ಯೋಗ ತೆರಿಗೆ, ಕೈಗಾರಿಕೆಯ ತೆರಿಗೆ, ಸೈನಿಕಾಗಿ ಕೊಡುಗೆ, ಸಾಮಾಜಿಕ ತೆರಿಗೆ, ದಂಡಗಳು, ಇತರೆ ತೆರಿಗೆಗಳು. ಜಮೀನಿನ ತೆರಿಗೆಯನ್ನು ಹಿಂದಿನಂತೆಯೇ ಜಮೀನಿನ ಗುಣ ಮತ್ತು ಬೆಳೆಯ ಪ್ರಮಾಣಕ್ಕನುಗುಣವಾಗಿ ನಿಗದಿ ಮಾಡಲಾಗುತ್ತಿತ್ತು. ಇವುಗಳನ್ನು ನಿರ್ಧರಿಸುವುದರಲ್ಲಿ ಪ್ರಾದೇಶಿಕ ಭಿನ್ನತೆ ಇದ್ದಂತೆ ತೋರುತ್ತದೆ. ಸ್ಥಿರ ಮತ್ತು ಚರ ಆಸ್ತಿಗಳ ಮೇಲೂ ತೆರಿಗೆ ಹಾಕಲಾಗುತ್ತಿತ್ತು. ಇದರ ನಿಖರವಾದ ವಿವರಗಳು ಅಷ್ಟಾಗಿ ಸಿಗುವುದಿಲ್ಲ. ಮಹಡಿಯ ಮನೆಗೆ ಎರಡು ಪಣಗಳು, ಒಳಗೆ ದೊಡ್ಡ ಹಜಾರವನ್ನುಳ್ಳ ಮಹಡಿಯಾದರೆ ಮೂರು ಪಣಗಳು, ಇತ್ಯಾದಿಯಾಗಿ ಮನೆಗಳ ವಿಸ್ತಾರದ ಮೇಲೆ ಮನೆಗಂದಾಯ ನಿರ್ಧಾರವಾಗುತ್ತಿತ್ತು. ಅಂಗಡಿಗಳು, ಎತ್ತಿನ ಗಾಡಿಗಳು ಮೊದಲಾದವುಗಳು ತೆರಿಗೆಗೆ ಸೇರುತ್ತಿದ್ದವು, ಹಳ್ಳಿಯ ಅಂಗಡಿಗಳಿಗೆ ಕಡಿಮೆ ತೆರಿಗೆ, ಪಟ್ಟಣ ಮತ್ತು ಜಾತ್ರೆಯಲ್ಲಿರುವ ಅಂಗಡಿಗಳಿಗೆ ಹೆಚ್ಚು ತೆರಿಗೆ ಬೀಳುತ್ತಿತ್ತು. ದಿನಬಳಕೆಯ ವಸ್ತುಗಳ ಮೇಲೂ ತೆರಿಗೆ ಇತ್ತು. ಉದ್ಯೋಗಗಳ ಮೇಲಿನ ತೆರಿಗೆಯು ವ್ಯವಸ್ಥಿತವಾಗಿದ್ದವು. ನೆಯ್ಗೆಯವನು ಒಂಬತ್ತು ಪಣಗಳನ್ನು ಕೊಟ್ಟರೆ ಅಕ್ಕಸಾಲಿಗನು ಐದು ಪಣಗಳನ್ನು ಕೊಡಬೇಕಾಗಿತ್ತು. ಹಾಗೆಯೇ ಕುಂಬಾರ, ಅಗಸ, ಗಾಣಿಗ ಇತ್ಯಾದಿ ಎಲ್ಲರಿಗೂ ತೆರಿಗೆ ಇತ್ತು. ಇನ್ನು ಸಾಮಾಜಿಕ ತೆರಿಗೆಗಳೆಂದರೆ ಮದುವೆ ಮೊದಲಾದ ಸಂದರ್ಭದಲ್ಲಿ ಕೊಡಬೇಕಾದವು. ಒಂದು ಮದುವೆಗೆ ಒಂದು ಬಾಗಿಲು ಹಣ, ಒಂದು ದೇವರ ಹಣ ಕೊಡಬೇಕಾಗಿತ್ತು.

ಗಂಡ ಸತ್ತ ಹೆಂಗಸಿಗೆ ಕೂಡಿಕೆ ಮದುವೆಗೆ ಇದರ ಅರ್ಧದಷ್ಟು ವಿಧಿಸಲಾಗಿತ್ತು. ದೇವರ ಕಾರ್ಯಕ್ಕಾಗಿ, ಹಬ್ಬಗಳಿಗಾಗಿ, ಜಾತ್ರೆ ಪರೀಷೆಗಳಿಗಾಗಿ ಹಣವನ್ನು ಕೂಡಿಸಲಾಗುತ್ತಿತ್ತು. ಅಪರಾಧಿಗಳಿಂದ ಬರುವ ದಂಡವು ರಾಜ್ಯದ ಬೊಕ್ಕಸಕ್ಕೆ ಸೇರುತ್ತಿತ್ತು. ಇದಲ್ಲದೆ ಕಾಲಕಾಲಕ್ಕೆ ಅವಶ್ಯಕವಾದ ಇತರೆ ತೆರಿಗೆಗಳನ್ನು ಕೂಡ ಹಾಕಲಾಗುತ್ತಿತ್ತು.

ತೆರಿಗೆಗಳನ್ನು ವಸೂಲು ಮಾಡುವುದಕ್ಕಾಗಿ ವ್ಯವಸ್ಥಿತವಾದ ಏರ್ಪಾಡು ಬೆಳೆದು ಬಂದಿತ್ತು. ತೆರಿಗೆಗಳು ಬೆಳೆದಂತೆ ಅದರ ವಸುಲಿ ಕ್ರಮದಲ್ಲಿಯೂ ಮಾರ್ಪಾಡಾಗುತ್ತಾ ಬಂದಿರಬೇಕು. ವಿಜಯನಗರದ ಕಾಲದಲ್ಲಿ ತೆರಿಗೆ ವಸೂಲಿಗಾಗಿ ನಾಲ್ಕು ಮಾರ್ಗಗಳನ್ನು ಅನುಸರಿಸಲಾಗುತ್ತಿತ್ತು. ಸರ್ಕಾರವೇ ಅಧಿಕಾರಿಗಳನ್ನು ನೇಮಿಸಿ ಅವರಿಂದ ತೆರಿಗೆಯನ್ನು ವಸೂಲು ಮಾಡಿಸುವುದು ಒಂದು ಬಗೆ. ಗುತ್ತಿಗೆಯ ಮಾದರಿ ಅಂದರೆ ಆಯಾ ಭಾಗದ ಉತ್ಪತ್ತಿಯನ್ನು ಹೆಚ್ಚಾಗಿ ಕೊಡಲೊಕುವವರಿಗೆ ಹರಾಜು ಹಾಕಿಕೊಡುವ ಮಾದರಿಯೂ ಎರಡನೆಯದಾಗಿತ್ತು. ಇನ್ನು ಮೂರನೆಯದಾಗಿ ಹಳ್ಳಿಯ ಸಂಘ–ಸಂಸ್ಥೆಗಳಿಗೆ ವಸೂಲಿಯ ಕಾರ್ಯವನ್ನು ಒಪ್ಪಿಸುವುದು. ನಾಡು, ಸಭೆ ಮೊದಲಾದವು ರಾಜನ ಪರವಾಗಿ ವಸೂಲಿ ಮಾಡುತ್ತಿದ್ದವು. ಇನ್ನೂ ನಾಲ್ಕನೆಯ ಮಾದರಿಯಾಗಿ ರಾಜರು ತಮ್ಮ ರಾಜ್ಯದ ಸ್ವಲ್ಪ ಭಾಗವನ್ನು ಪ್ರಮುಖ ನಾಯಕನಿಗೆ ಬಿಟ್ಟು ಕೊಡುವುದು. ಅದರ ಫಲವಾಗಿ ಆ ನಾಯಕನು ನಿರ್ಧಿಷ್ಟವಾದ ಹಣವನ್ನು ರಾಜ್ಯದ ಬೊಕ್ಕಸಕ್ಕೆ ಪ್ರತಿ ವರ್ಷವೂ ಸಲ್ಲಿಸುವುದು ಇದನ್ನು ನಾಯಕರ ಪದ್ಧತಿ ಎಂದು ಕರೆಯುತ್ತಿದ್ದರು.

ಈ ಮೊದಲೇ ಚರ್ಚಿಸಿದ ಹಾಗೆ ತೆರಿಗೆಗಳಲ್ಲಿ ಅವಶ್ಯಕವಾದ ಮತ್ತು ಸೂಕ್ತವಾದ ಸಂದರ್ಭಗಳಲ್ಲಿ ಕೆಲವು ವಿನಾಯಿತಿಯನ್ನು ತೋರಿಸಲಾಗುತ್ತಿತ್ತು. ಮಳೆ ಬೆಳೆ ಆಗದೇ ಇರುವ ಸಂದರ್ಭದಲ್ಲಿ ರೈತರಿಗೆ ತೆರಿಗೆಯ ಪೂರ್ಣ ವಿನಾಯಿತಿ ಅಥವಾ ಅರ್ಧ ವಿನಾಯಿತಿಯ ಸೌಲಭ್ಯ ಲಭಿಸುತ್ತಿತ್ತು. ದಾನ, ದತ್ತಿ ಮೊದಲಾದವುಗಳಿಗೆ ತೆರಿಗೆ ಇರಲಿಲ್ಲ. ಈ ತೆರಿಗೆಯ ವ್ಯವಸ್ಥೆಯನ್ನೆಲ್ಲ ನಿರ್ವಹಿಸಲು ಬೇರೆ ಬೇರೆ ಹಂತಗಳಲ್ಲಿ ಸಿಬ್ಬಂದಿ ಇದ್ದು ಅದರ ಮೇಲ್ವಿಚಾರಕರಾಗಿ ಒಬ್ಬ ಮಂತ್ರಿಯನ್ನು ನೇಮಕ ಮಾಡುತ್ತಿದ್ದರು. ಈ ವಿಭಾಗವನ್ನು **“**ಅಥವಣ**”** ಕರೆಯಲಾಗಿದೆ ಎಂಬುದು ವಿಜಯನಗರದ ಶಾಸನಗಳಿಂದ ತಿಳಿದು ಬರುತ್ತದೆ.

**ರಾಜ್ಯ ವ್ಯಯದ ಸ್ವರೂಪ**

ಹೀಗೆ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಆಡಳಿತದ ಒಂದು ಮುಖವಾದರೆ ಅದನ್ನು ವಿತರಣೆಯಿಂದ ವಿನಿಯೋಗಿಸುವುದು ಇನ್ನೊಂದು ಮುಖ. ಜನರಿಂದ ಪಡೆದ ಹಣವನ್ನು ಸರ್ಕಾರಗಳು ಜನರಿಗಾಗಿಯೇ ಖರ್ಚು ಮಾಡುತ್ತಿದ್ದವು. ಕೌಟಿಲ್ಯನ ಅರ್ಥಶಾಸ್ತ್ರ ಸರ್ಕಾರದ ವ್ಯಯದಲ್ಲಿ ಹದಿನಾಲ್ಕು ಅಂಗಗಳನ್ನು ಹೇಳುತ್ತದೆ. ಅವುಗಳಲ್ಲಿ ಅರಮನೆಯ ಅಂತ:ಪುರ ಮೊದಲಾದವುಗಳನ್ನು ಬಿಟ್ಟರೆ, ಪ್ರಜೆಗಳ ಹಿತ ರಕ್ಷಣೆ, ಆಡಳಿತ ಸೌಕರ್ಯ, ಸೈನ್ಯಸಿದ್ಧತೆ, ಇವುಗಳನ್ನು ಮುಖ್ಯವಾಗಿ ಹೇಳಬಹುದು. ಶುಕ್ರ ನೀತಿ ಸಾರವು ಪ್ರಧಾನವಾದ ನಾಲ್ಕು ಅಂಶಗಳಲ್ಲಿ ಇದರ ವಿವರಣೆಯನ್ನು ನೀಡುತ್ತದೆ. ದಾನ ಧರ್ಮ, ಸ್ವಂತ ಉಪಯೋಗ, ಆಡಳಿತ ಮತ್ತು ಜನಹಿತ ಕಾರ್ಯಗಳಿಗೆ ಇವುಗಳಿಗಾಗಿ ಒಟ್ಟು ಉತ್ಪಾದನೆಯ ಎಷ್ಟೆಷ್ಟು ಭಾಗವನ್ನು ತೆಗೆದಿಡಬೇಕೆಂಬುದನ್ನು ಅದು ತಿಳಿಸುತ್ತದೆ. ಶೇಕಡಾ ಎಂಟರಷ್ಟು ದಾನಕ್ಕಾಗಿಯೂ, ಶೇಕಡ ಎಂಟರಷ್ಟು ಸ್ವಂತಕ್ಕಾಗಿಯೂ ತೆಗೆದಿಟ್ಟು, ಉಳಿದುದನ್ನು ಆಡಳಿತಕ್ಕಾಗಿ ಮತ್ತು ಜನಹಿತಕ್ಕಾಗಿ

ಬಳಸಬೇಕೆಂಬುದು ಅದರ ಆದೇಶ. ರಸ್ತೆ ನಿರ್ಮಾಣ, ವಿದ್ಯಾಭ್ಯಾಸ, ಆರೋಗ್ಯ ರಕ್ಷಣೆ, ಕೆರೆ ಕಟ್ಟೆಗಳ ನಿರ್ಮಾಣ, ಮುಂತಾದ ಜನ ಹಿತ ಕಾರ್ಯಗಳಲ್ಲಿ ಸೇರುತ್ತಿದ್ದವು. ಸ್ವಲ್ಪ ಹೆಚ್ಚು ಕಡಿಮೆ ಈ ಆದರ್ಶದಲ್ಲಿ ಕರ್ನಾಟಕದ ರಾಜರು ರಾಜ್ಯದ ಸಂಪತ್ತನ್ನು ವಿನಿಯೋಗಿಸುತ್ತಾ ಬಂದರು. ಸರ್ಕಾರಗಳು ಹಣದ ರೂಪದಲ್ಲಿ ವ್ಯಯ ಮಾಡುವುದು ತುಂಬಾ ಕಡಿಮೆಯಾಗಿತ್ತು. ಆಡಳಿತದ ಅಧಿಕಾರಿಗಳಿಗೂ ಭೂಮಿಯನ್ನು ದತ್ತಿ ನೀಡುತ್ತಿದ್ದರು. ಗ್ರಾಮಗಳ ರಕ್ಷಣೆ, ಶಾಂತಿ ಸುವ್ಯವಸ್ಥೆ, ಮೊದಲಾದವುಗಳನ್ನು ಗ್ರಾಮ ಸಭೆಗಳ ಮೂಲಕ ನಿರ್ವಹಿಸುತ್ತಿದ್ದರು. ಹೀಗಾಗಿ ಸರ್ಕಾರ ನೇರವಾಗಿ ಹೆಚ್ಚು ಖರ್ಚು ಮಾಡಬೇಕಾಗಿರಲಿಲ್ಲ. ವಿದ್ಯಾಭ್ಯಾಸಕ್ಕಾಗಿ ಮಾಡುತ್ತಿದ್ದ ಖರ್ಚು ವೆಚ್ಚಗಳನ್ನು ದಾನದತ್ತಿಗಳ ಮೂಲಕವೇ ನಿರ್ವಹಣೆ ಮಾಡುತ್ತಿತ್ತು. ಆದರೆ ಸೈನ್ಯದ ಸಿದ್ಧತೆ ಮತ್ತು ನಿರ್ವಹಣೆಗಳು ಉತ್ಪಾದನೆಯ ಬಹುಭಾಗವನ್ನು ವ್ಯಯ ಮಾಡುತ್ತಿದ್ದವು. ಇದು ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅನಿವಾರ್ಯವಾದ ಒಂದು ಅಂಗವಾಗಿತ್ತು ಮತ್ತು ಅದಕ್ಕೆ ಖರ್ಚು ಮಾಡುವ ಅಗತ್ಯತೆಯು ಇತ್ತು. ಧರ್ಮಕಾರ್ಯಗಳಿಗಾಗಿ ದಾನದತ್ತಿಗಳನ್ನು ಕೊಡುವುದು ವ್ಯಯದ ಒಂದು ದೊಡ್ಡ ಭಾಗವೇ ಆಗಿತ್ತು. ಕರ್ನಾಟಕದ ಪ್ರಮುಖ ರಾಜರೆಲ್ಲರೂ ಉದಾಹರಣೆಗಳು ಧಾರ್ಮಿಕರು ಆಗಿದ್ದು ಆ ಪರಂಪರೆಯನ್ನು ಒಬ್ಬರಿಗಿಂತ ಒಬ್ಬರು ಮಿಗಿಲಾಗಿ ಬೆಳೆಸಿಕೊಂಡು ಬಂದರು. ನಾಡಿನಲ್ಲಿ ದೊರೆತಿರುವ ಸಾವಿರಾರು ಶಾಸನಗಳು ಅದಕ್ಕೆ ಉಜ್ವಲವಾದ ಸಾಕ್ಷಿಯಾಗಿ ನಿಂತಿವೆ. ಒಟ್ಟಿನಲ್ಲಿ ಜನರ ಹಿತಕ್ಕಾಗಿ ಆಡಳಿತದ ನಿರ್ವಹಣೆ ಎಂಬುದನ್ನು ಕರ್ನಾಟಕದ ರಾಜ್ಯ ಶಕ್ತಿ ಮೊದಲಿನಿಂದಲೂ ಬೆಳೆಸಿಕೊಂಡು ಬಂದುದನ್ನು ಅದರ ಉಜ್ವಲವಾದ ಪರಂಪರೆ ತೋರಿಸಿಕೊಡುತ್ತದೆ. ವ್ಯಯದ ವಚ್ಚವನ್ನು ಸಂಕ್ಷಿಪ್ತವಾಗಿ ನೋಡುವುದಾದರೆ ಈ ಕೆಳಗಿನಂತೆ ನೋಡಬಹುದು.

**ಆಡಳಿತ ವೆಚ್ಚ**

ರಾಜರು, ಯುವರಾಜರು, ಅಮಾತ್ಯರು, ಲಿಖಿತಕಾರರು ಮತ್ತು ಇತರ ಅಧಿಕಾರಿಗಳ ವೇತನ ಮತ್ತು ನಿರ್ವಹಣೆಗೆ ವೆಚ್ಚ ಮಾಡಲಾಗುತ್ತಿತ್ತು.

**ಸೇನಾ ವೆಚ್ಚ**

ಸೈನಿಕರ ಸಂಬಳ, ಯುದ್ಧೋಪಕರಣಗಳು, ಕೋಟೆ ಮತ್ತು ನಗರರಕ್ಷಣೆ—ಇವುಗಳಿಗೆ ಬಹುಪಾಲು ಆದಾಯ ವ್ಯಯವಾಗುತ್ತಿತ್ತು.

**ಧಾರ್ಮಿಕ ವ್ಯಯ**

ದೇವಾಲಯ ನಿರ್ಮಾಣ, ಮಠಗಳ ಪೋಷಣೆ, ಬ್ರಾಹ್ಮಣರಿಗೆ, ಜೈನ ಮತ್ತು ಬೌದ್ಧ ಸಂಸ್ಥೆಗಳಿಗೆ ದಾನ ನೀಡಲಾಗುತ್ತಿತ್ತು. ಇದು ರಾಜ್ಯದ ಧಾರ್ಮಿಕ ಸಹಿಷ್ಣುತೆಯನ್ನು ತೋರಿಸುತ್ತದೆ.

**ಸಾರ್ವಜನಿಕ ಹಿತಕಾರ್ಯಗಳು**

ಕೆರೆ, ಕಾಲುವೆ, ಬಾವಿ ನಿರ್ಮಾಣ, ರಸ್ತೆ ಮತ್ತು ಧರ್ಮಶಾಲೆಗಳು, ಅಗ್ರಹಾರಗಳ ಸ್ಥಾಪನೆ ಇವು ಕೃಷಿ ಮತ್ತು ವ್ಯಾಪಾರ ವೃದ್ಧಿಗೆ ಸಹಾಯ ಮಾಡುತ್ತಿತ್ತು.

**ಆದಾಯ–ವ್ಯಯ ಮತ್ತು ಸಮಾಜ**

ರಾಜ್ಯದ ಆರ್ಥಿಕ ನೀತಿಗಳು ರೈತರು, ವ್ಯಾಪಾರಿಗಳು, ಕಾರ್ಮಿಕರು ಮತ್ತು ಧಾರ್ಮಿಕ ಸಂಸ್ಥೆಗಳ ಮೇಲೆ ನೇರ ಪರಿಣಾಮ ಬೀರಿದ್ದವು. ತೆರಿಗೆ ವ್ಯವಸ್ಥೆಯು ಸಾಮಾಜಿಕ ಸಮತೋಲನವನ್ನು ಕಾಯ್ದುಕೊಳ್ಳುವ ಉದ್ದೇಶವನ್ನು ಹೊಂದಿತ್ತು.

**ಶಾಸನಾಧಾರಿತ ಆರ್ಥಿಕ ಮಾಹಿತಿ**

ಶಾಸನಗಳು ಆರ್ಥಿಕ ಇತಿಹಾಸದ ನೈಜ ದಾಖಲೆಗಳಾಗಿವೆ. ಅವುಗಳಿಂದ ತೆರಿಗೆ ಹೆಸರುಗಳು, ದಾನದ ಸ್ವರೂಪ, ವ್ಯಯದ ಉದ್ದೇಶಗಳು ಸ್ಪಷ್ಟವಾಗುತ್ತವೆ.

**ಸಮಕಾಲೀನ ದಕ್ಷಿಣ ಭಾರತದೊಂದಿಗೆ ಹೋಲಿಕೆ**

ಪ್ರಾಚೀನ ಕರ್ನಾಟಕದ ಆದಾಯ–ವ್ಯಯ ವ್ಯವಸ್ಥೆ ಚೋಳ, ಪಾಂಡ್ಯ ರಾಜ್ಯಗಳ ವ್ಯವಸ್ಥೆಯೊಂದಿಗೆ ಸಾಮ್ಯತೆ ಮತ್ತು ವೈಶಿಷ್ಟತೆ ಹೊಂದಿತ್ತು.

**ಉಪಸಂಹಾರ**

ಪ್ರಾಚೀನ ಕರ್ನಾಟಕದ ರಾಜ್ಯ ಆದಾಯ ಮತ್ತು ವ್ಯಯ ವ್ಯವಸ್ಥೆ ಸುಸಂಘಟಿತ, ಕಾರ್ಯಕ್ಷಮತೆ ಮತ್ತು ಜನಪರವಾಗಿತ್ತು. ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆಯೊಂದಿಗೆ ವ್ಯಾಪಾರ ಮತ್ತು ಧಾರ್ಮಿಕ ಪೋಷಣೆಯ ಸಮತೋಲನವು ರಾಜ್ಯದ ದೀರ್ಘಕಾಲೀನ ಸ್ಥಿರತೆಗೆ ಕಾರಣವಾಯಿತು. ಶಾಸನಾಧಾರಿತ ಅಧ್ಯಯನವು ಪ್ರಾಚೀನ ಕರ್ನಾಟಕದ ಆರ್ಥಿಕ ಜಾಣ್ಮೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ.

**ಪರಾಮರ್ಶನ ಗ್ರಂಥಗಳು**


- Government of Karnataka. (n.d.). *Karnataka itihasa samputa*.
- Rice, B. L. (Ed.). (n.d.). *Epigraphia Carnatica*.
- Saletore, B. A. (n.d.). *Social and political life in the Vijayanagara Empire*.
- Sastri, K. A. Nilakanta. (n.d.). *A history of South India*.
- Thipperudraswamy, H. (n.d.). *Karnataka samskriti sameekshe*.